ಸರಿಯಾಗಿ ನಡೆದಿಲ್ಲವೆಂಬಂದು ಅವರ ಭಾವನೆಯಾಗಿದೆ. ನಾನು ಅವರಿಗೆ ಆಶ್ವಾಸನೆ ಕೊಡುತ್ತೇನೆ. ಇದರ ಬಗ್ಗೆ ಬೆಳಗಾವಿ ವಿಭಾಗದ ಡಿ.ಐ.ಜಿ. ಯವರ ಮೂಲಕ ನಿಷ್ಪಕ್ಷಪಾತವಾದ ವಿಚಾರಣೆಯನ್ನು ನಡೆಸಿ ಯಾರು ತಪ್ಪಿತಸ್ಥರು ಇದ್ದಾರೋ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಜ್ಞಾನದೇವ ಎಸ್. ದೊಡ್ಡಮೇಟಿ — ಮಾನ್ಯ ಅಧ್ಯಕ್ಷರೇ, ಆ ಪೋಲೀಸರನ್ನು ಶಿಕ್ಷೆ ಮಾಡಿ ವರ್ಗ ಮಾಡಿಲ್ಲ. ಹೆಚ್ಚಿನ ಒಂದು ದೊಡ್ಡ ಪೋಲೀಸ್ ಸ್ಟೇಷನ್‌ಗೆ ವರ್ಗ ಮಾಡಿರುವುದರಿಂದ ಅವರಿಗೆ ಭಡ್ತಿಯನ್ನು ಕೊಟ್ಟ ಹಾಗೆ ಆಯಿತು ಎಂದು ಕಾಣುತ್ತದೆ. ಈಗಾಗಲೇ ಅವರು ಭಡ್ತಿಯ ಹಾದಿಯಲ್ಲಿ ಇರುವುದರಿಂದ ಅವರಿಗೆ ಆ ಭಡ್ತಿಯನ್ನು ತಡೆಯಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ಜಿ ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ, ಅದು ಅವರಿಗೆ ಭಡ್ತಿ ಅಲ್ಲ. ಕೇವಲ ಅವರಿಗೆ ಟ್ರಾನ್ಸ್‌ಫರ್ ಆಗಿದೆ. ಅದನ್ನೇ ನಾನು ಹೇಳಿದ್ದೇನೆ. ನಿಮ್ಮ ಭಾವನೆ ಸರ್ಕಾರಕ್ಕೆ ಅರ್ಥ ಆಗಿದೆ. ಈ ಬಗ್ಗೆ ಸೂಕ್ತವಾದ ಪರಿಹಾರವನ್ನು ಕಂಡುಹಿಡಿಯುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

(3) ಪುತ್ತೂರು ತಾಲ್ಲೂಕಿನ ನೆಟ್ಟಣ ಎಂಬಲ್ಲಿ ಇಂಡಿಯನ್ ಪ್ಲೈವುಡ್ ಮ್ಯಾನುಫ್ಯಾಕ್ಚರಿಂಗ್ ಕಂಪೆನಿಯ ಕಾರ್ಮಿಕರು ಮುಷ್ಕರ ಹೂಡಿದ್ದರೂ ಸರ್ಕಾರ ಯಾವುದೇ ಕ್ರಮ ಕೈಗೊಳ್ಳದಿರುವುದರ ಬಗ್ಗೆ

ಶ್ರೀ ಕೆ. ಕುಶಾಲ (ಸುಳ್ಯ).—ಮಾನ್ಯ ಅಧ್ಯಕ್ಷರೇ, ಪುತ್ತೂರು ತಾಲ್ಲೂಕಿನ ನೆಟ್ಟಣ ಎಂಬಲ್ಲಿ ಇಂಡಿಯನ್ ಪ್ಲೈವುಡ್ ತಯಾರಿಕರ ಕಂಪನಿಯ ಕಾರ್ಮಿಕರು ಮುಷ್ಕರ ಹೂಡಿದ್ದು ಸರ್ಕಾರ ಈ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದಿರುವುದರ ಬಗ್ಗೆ ಮಾನ್ಯ ಕಾರ್ಮಿಕ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಸ್. ಕೆ. ಕಾಂತ (ಕಾರ್ಮಿಕ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಈ ವಿಷಯದ ಬಗ್ಗೆ ನಾನು ಈ ಕೆಳಕಂಡ ಹೇಳಿಕೆಯನ್ನು ಕೊಡಬಯಸುತ್ತೇನೆ.

ಇಂಡಿಯನ್ ಪ್ಲೈವುಡ್ ಮ್ಯಾನುಫ್ಯಾಕ್ಚರಿಂಗ್ ಕಂಪನಿ ನೆಟ್ಟಣ ಇಲ್ಲಿ ಒಟ್ಟು ೧೬೦ ಜನ ಕೆಲಸಗಾರರು ಕೆಲಸ ಮಾಡುತ್ತಿದ್ದು ಅವರಲ್ಲಿ ೨೩ ಜನ ಕಂಟ್ರಾಕ್ಟ್ ಕೆಲಸಗಾರರು ಇದ್ದಾರೆ. ಈ ೨೩ ಜನರು ಕಂಟ್ರಾಕ್ಟ್ ಕೆಲಸಗಾರರು, ಕಂಟ್ರಾಕ್ಟರುಗಳಾದ ಶ್ರೀ ಅಹಮದ್ ಕುಂಞಿ, ಶ್ರೀ ಕಮ್ಮ, ಶ್ರೀಮತಿ ನಾಗಮ್ಮ ಕೊಂಡರೆಡ್ಡಿ ಇವರ ಕೈಕೆಳಗೆ ಕೆಲಸ ಮಾಡುತ್ತಿದ್ದಾರೆ. ಈ ಕಂಟ್ರಾಕ್ಟ್ ಕೆಲಸಗಾರರು, ಖಾಯಂ ಕೆಲಸಗಾರರಿಗೆ ಸಿಗುವ ಸಂಬಳ, ರಜೆ, ಬೋನಸ್ ಇತ್ಯಾದಿ ಸಿಗಬೇಕೆಂದು ಬೇಡಿಕೆ ಹೂಡಿ ದಿನಾಂಕ ೪-೪-೮೮ ರಿಂದ ಮುಷ್ಕರ ಹೂಡಿದ್ದಾರೆ.

ಈ ಬಗ್ಗೆ ತಕ್ಷಣ ಮಧ್ಯೆ ಪ್ರವೇಶಿಸಿ ಸಂಧಾನ ಪ್ರಯತ್ನಗಳನ್ನು ನಡೆಸಲಾಗಿದೆ. ಮುಷ್ಕರ ಪ್ರಾರಂಭವಾಗಿದ್ದರಿಂದ ವಿಷಯವನ್ನು ಸಂಧಾನಕ್ಕೆ ತೆಗೆದುಕೊಳ್ಳಬೇಕಾಯಿತು. ಮಂಗಳೂರಿನ ಸಹಾಯಕ ಕಾರ್ಮಿಕ ಆಯುಕ್ತರು ದಿನಾಂಕ ೪-೪-೮೮, ೭-೪-೮೮, ೨೧-೪-೮೮, ೨೭-೪-೮೮ ಮತ್ತು ೩೦-೪-೮೮ ರಂದು ಸಂಧಾನ ಸಭೆಗಳನ್ನು ನಡೆಸಿ ಮಾತುಕತೆ ನಡೆಸಿದ್ದಾರೆ.

ಈ ಬಗ್ಗೆ ಎರಡೂ ಪಕ್ಷಗಳ ನಡುವೆ ವಿವಾದ ಇರುವುದರಿಂದ ಮತ್ತು ಸಂಧಾನ ಪ್ರಯತ್ನ ಸಫಲವಾಗದೆ ಹೋದುದರಿಂದ, ಸಂಧಾನಾಧಿಕಾರಿಗಳು ವರದಿಯನ್ನು ದಿನಾಂಕ ೫-೫-೮೮ ರಂದು ಸರ್ಕಾರಕ್ಕೆ ಕಳುಹಿಸಿದ್ದಾರೆ. ಅದರ ಪ್ರಕಾರ ವಿವಾದದ ವಿಷಯವನ್ನು ನ್ಯಾಯ ಪಂಚಾಯಿತಿಗೆ ಒಪ್ಪಿಸುವ ಬಗ್ಗೆ ಪರಿಶೀಲನೆಯಲ್ಲಿದೆ.

ಈಗ ಕೆಲಸಗಾರರು ಮುಷ್ಕರದಲ್ಲಿರುವುದರಿಂದ, ಪೂರ್ಣ ಪರಿಶೀಲನೆಯನ್ನು ಕೆಲಸ ಪ್ರಾರಂಭವಾದ ಮೇಲೆ ಮಾಡಬೇಕಾಗುತ್ತದೆ. ಆದ್ದರಿಂದ ಕೆಲಸ ಪ್ರಾರಂಭವಾದ ಮೇಲೆ ಈ ಬಗ್ಗೆ ಪೂರ್ಣ ಪರಿಶೀಲನೆ ನಡೆಸಿ ಕಂಟ್ರಾಕ್ಟ್ ಕೆಲಸಗಾರರ ಕಾನೂನಿನ ಉಲ್ಲಂಘನೆಗಳು ಇದ್ದಲ್ಲಿ ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಕೆ.ಕುಶಾಲ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ತಮ್ಮ ಹೇಳಿಕೆಯಲ್ಲಿ ಶ್ರೀ ಕಮ್ಮ್ಯ, ಶ್ರೀಮತಿ ನಾಗಮ್ಮ ಕೊಂಡರೆಡ್ಡಿ, ಶ್ರೀ ಅಹಮದ್ ಕಂಯಿ ಇವರುಗಳು ಕಂಟ್ರಾಕ್ಟರುಗಳು ಎಂದು ಹೇಳಿದ್ದಾರೆ. ಆದರೆ ಇವರಲ್ಲಿ ಶ್ರೀ ಕಮ್ಮ್ಯ ಎನ್ನುವವರು ಹೊರದೇಶದಲ್ಲಿ ಇದ್ದಾರೆ. ಈ ರೀತಿ ಸುಳ್ಳು ಹೆಸರನ್ನು ಹೇಳಿ ಈ ಕಾಂಟ್ರಾಕ್ಟರುಗಳ ಕೈಕೆಳಗೆ ಕೆಲಸ ಮಾಡುತ್ತಿದ್ದಾರೆಂದು ವರದಿಯನ್ನು ಕೊಟ್ಟಿದ್ದಾರೆ. ಅದೇ ರೀತಿ ಶ್ರೀಮತಿ ನಾಗಮ್ಮ ಕೊಂಡರೆಡ್ಡಿ ಅವರು ಸೂಪರ್‌ವೈಸರ್‌ವರ ಪತ್ನಿ ಆಗಿರುತ್ತಾರೆ. ಅವರ ಬಗ್ಗೆಯೂ ಸುಳ್ಳು ವರದಿ ಕೊಟ್ಟು ಕಾಂಟ್ರಾಕ್ಟರ್‌ರಾಗಿ ಕೆಲಸ ಮಾಡುತ್ತಿದ್ದಾರೆಂದು ಹೇಳಿದ್ದಾರೆ. ಇವತ್ತು ಸಂಧಾನಕ್ಕೆ ಯಾವುದೇ ಕಾರ್ಮಿಕರು ಮುಂದೆ ಬಂದಿಲ್ಲ. ಅವರು ಮೂಲೀಕರನ್ನು ಮಾತ್ರ ಕರೆಯಿಸಿದ್ದು ಅದೂ ಕೂಡ ವಿಫಲವಾಗಿದೆ. ಮಂಗಳೂರು ಕಾರ್ಮಿಕ ಆಯುಕ್ತರು ಈ ಬಗ್ಗೆ ವಿವರವಾದ ವರದಿಯನ್ನು ಒಪ್ಪಿಸಿದ್ದು ಕೋರ್ಟಿಗೆ ಹೋಗುವುದಕ್ಕೂ ಕೂಡಾ ಕೇಳಿಕೊಳ್ಳಲಾಗಿದೆ. ಇದರ ಬಗ್ಗೆ ಸರ್ಕಾರ ಯಾವುದೇ ಕ್ರಮವನ್ನು ಕೈಗೊಂಡಿಲ್ಲ. ನಿಜಕ್ಕೂ ಅಲ್ಲಿ ಳು-ೀರಿಂದ ಅವರು ಮುಷ್ಕರ ಹೂಡಿರುತ್ತಾರೆ. ಈಗ ಕೆಲಸಗಾರರು ಮುಷ್ಕರದಲ್ಲಿರುವುದರಿಂದ ಪೂರ್ಣ ಪರಿಶೀಲನೆಯನ್ನು ಕೆಲಸ ಪ್ರಾರಂಭವಾದ ಮೇಲೆ ಮಾಡಬೇಕಾಗುತ್ತದೆ ಎಂದು ಮಾನ್ಯ ಮಂತ್ರಿಗಳು ತಮ್ಮ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಅವರು ಮುಷ್ಕರದಲ್ಲಿ ಇರುವುದರಿಂದ ಅವರು ಕೆಲಸಕ್ಕೆ ಹಾಜರಾಗುವ ಪ್ರಶ್ನೆಯೇ ಇಲ್ಲ. ಈ ಬಗ್ಗೆ ಮಾನ್ಯ ಮಂತ್ರಿಗಳು ಸರಿಯಾದ ಉತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

೧೨-೦೦ ಮಧ್ಯಾಹ್ನ

ಶ್ರೀ ಎಸ್. ಕೆ. ಕಾಂತ್.—ಮಾನ್ಯ ಸದಸ್ಯರಿಗೆ ಕಾರ್ಮಿಕರ ಅನುಭವವಿಲ್ಲವೆಂದು ಕಾಣುತ್ತದೆ. ಸಂಧಾನ ನಡೆಸಲು ಪ್ರಯತ್ನಪಟ್ಟು ಇಬ್ಬರೂ ಸಂಧಾನಕ್ಕೆ ಬರಲಿಲ್ಲ. ಈ ಬಗ್ಗೆ ಸರ್ಕಾರಕ್ಕೆ ವರದಿ ಬಂದಿದೆ. ಆ ವರದಿಯನ್ನು ಲೇಬರ್ ಕೋರ್ಟಿಗೆ ಅಥವಾ ಇಂಡಸ್ಟ್ರೀಯಲ್ ಟ್ರಿಬ್ಯೂನಲ್‌ಗೆ ಕಳುಹಿಸ ಬೇಕಾಗುತ್ತದೆ. ಅದು ತಡವಾಗುತ್ತದೆ. ಅವರು ಕಂಟ್ರಾಕ್ಟ್ ಲೇಬರ್ಸ್ ಅಲ್ಲ, ಕಾರ್ಖಾನೆಯಲ್ಲಿ ಸತತವಾಗಿ ಕೆಲಸ ಮಾಡುತ್ತಿದ್ದಾರೆ ಎನ್ನತಕ್ಕ ವಿಚಾರವನ್ನು ಅವರಂ ಪ್ರೂವ್ ಮಾಡಬೇಕಾಗುತ್ತದೆ. ಅದು ಅವರು ಅಲ್ಲಿ ಕೆಲಸ ಮಾಡುತ್ತಿದ್ದಾಗ, ಯಾವ ರೀತಿ ಕೆಲಸ ಮಾಡುತ್ತಾರೆ, ಯಾವ ಕೆಲಸ ಮಾಡುತ್ತಾರೆ. ಇದಂ ಎಲ್ಲಾ ಗೊತ್ತಾಗುತ್ತದೆ. ಅವರು ಮಿಷಿನ್‌ನಲ್ಲಿ ಬೇರೆ ಕೆಲಸಗಾರರು ಮಾಡುವ ಎಲ್ಲಾ ಕೆಲಸಗಳನ್ನು ಮಾಡುತ್ತಿದ್ದರೆ, ಅವರಿಗೂ ಕೂಡ, ಸಂಬಳ ಬೋನಸ್ ಮಂತ್ತು ಇತರ ಸವಲತ್ತು ಗಳನ್ನು ಕೊಡಬೇಕಾಗುತ್ತದೆ. ನಾನು ಮಾನ್ಯ ಸದಸ್ಯರಾದ ಇದಿನಬ್ಬರವರ ಪ್ರಶ್ನೆಗೆ ಉತ್ತರ ಕೊಡುವಾಗ ಹೇಳಿದ್ದೇನೆ. ವಾಲೀಕರು ಕಂಟ್ರಾಕ್ಟ್ ಕೆಲಸಗಾರರನ್ನು ಶೋಷಣೆ ಮಾಡತಕ್ಕಂಥ ಕೆಲಸವನ್ನು ಮಾಡುವುದಾದರೆ, ನಾವು ಅದನ್ನು ಮುಂದುವರಿಸಲು ಬಿಡುವುದಿಲ್ಲವೆಂದು ಹೇಳಿದ್ದೇನೆ. ಮಾನ್ಯ ಸದಸ್ಯರು ನಿನ್ನೆ ಒಂದಂ ಪತ್ರವನ್ನು ಕೊಟ್ಟಿದ್ದಾರೆ. ನಾನು ಅದನ್ನು ಕಂಟ್ರಾಕ್ಟ್ ಅಬಾಲಿಷನ್ ಆಡ್ವೈಸರಿ ಬೋರ್ಡಿನ ಪರಿಶೀಲನೆಗಾಗಿ ಇಟ್ಟಿದ್ದೇನೆ. ಶೀಘ್ರವೇ ತಾರೀಖು ಅದರ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಕೆ. ಕುಶಾಲ.—೧೯೮೭ ರಿಂದ ಅವರ ಸಂಬಳದಲ್ಲಿ ಪ್ರಾವಿಡೆಂಟ್ ಫಂಡ್‌ನಲ್ಲಿ ಕಡಿತ ಮಾಡುತ್ತಿದ್ದಾರೆ. ಇದರಿಂದಲೇ ಅವರು ಖಾಯಂ ಕೆಲಸಗಾರರೆಂದು ಗೊತ್ತಾಗುವುದಿಲ್ಲವೆ ?

ಶ್ರೀ ಎಸ್. ಕೆ. ಕಾಂತ.—ಅವರು ೧೭ ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆಂದು ಹೇಳಿದ್ದೀರಿ, ಆ ಬಗ್ಗೆ ನೀವು ಪತ್ರವನ್ನು ಕೊಟ್ಟಿದ್ದೀರಿ, ೧೭ ವರ್ಷಗಳಿಂದ ಏಕೆ ಸುಮ್ಮನಿದ್ದಿರಿ, ಖಾಯಂ ಗೊಳಿಸಲಿಲ್ಲವೆಂದು ಇಲ್ಲಿಯವರೆಗೆ ಏನು ಮಾಡಿದ್ದೀರಿ, ಎಂಬ ಪ್ರಶ್ನೆ ಬರುತ್ತದೆ. ಕಾರ್ಮಿಕರು ಸಂಬಂಧಪಟ್ಟ ಅಧಿಕಾರಿಗಳನ್ನು ಅಪ್ರೋಚ್ ಮಾಡಿದರೆ ಮಾತ್ರ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಾಗುತ್ತದೆ.

ಶ್ರೀ ಕೆ. ಕುಶಾಲ.—ಅವರು ಮುಷ್ಕರ ಹೂಡಿರುವುದು ಕೇವಲ ಸಂಬಳಕ್ಕಾಗಿಯೇ ಮಾತ್ರವಲ್ಲ. ಅವರು ರಜೆ ಸೌಲಭ್ಯಗಳನ್ನು ಒದಗಿಸಬೇಕು ಎಂದೂ ಮುಷ್ಕರ ಹೂಡಿದ್ದಾರೆ.

ಶ್ರೀ ಎಸ್. ಕೆ. ಕಾಂತ.—ಅಲ್ಲಿ ೧೬೦ ಜನರು ಕೆಲಸ ಮಾಡುತ್ತಿದ್ದಾರೆ. ೨೩ ಜನರು ಸ್ಟ್ರೈಕ್ ಮಾಡಿದರೆ, ಅಲ್ಲಿಯ ಕೆಲಸ ನಿಲ್ಲುವುದಿಲ್ಲ. ಮೂಗು ಮುಚ್ಚಿದರೆ ಬಾಯಿ ತೆಗೆಯುತ್ತದೆ ಎನ್ನುವ

ರೀತಿಯಲ್ಲಿ ಮಾನ್ಯ ಸದಸ್ಯರು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಇದರ ಬಗ್ಗೆ ವಿಚಾರಣೆ ಮಾಡುತ್ತೇನೆ. ಇವರು ಕಂಟ್ರಾಕ್ಟ್ ವರ್ಕ್ಸ್ ಅಲ್ಲವೆಂದು ಪ್ರೂವ್ ಮಾಡಬೇಕು. ಅದನ್ನು ಪ್ರೂವ್ ಮಾಡಿದರೆ ಬೇರೆ ಕೆಲಸಗಾರರನ್ನು ಹೇಗೆ ಪರಿಗಣಿಸುತ್ತಾರೆ ಹಾಗೆಯೇ ಇವರನ್ನು ಪರಿಗಣಿಸಬೇಕೆಂದು ಸೂಕ್ತವಾದ ಆದೇಶ ಕೊಡುತ್ತೇನೆ.

ಶ್ರೀ ಕೆ. ಕುಶಾಲ.—ಅಲ್ಲಿ ಮುಷ್ಕರವನ್ನು ತಡೆಹಿಡಿಯಬೇಕು. ಸ್ಟ್ರೈಕನ್ನು ಬ್ಯಾನ್ ಮಾಡಬೇಕು. ಸರ್ಕಾರವು ಮಧ್ಯೆ ಪ್ರವೇಶಿಸಿ ಈ ಸಮಸ್ಯೆಯನ್ನು ಇತ್ಯರ್ಥ ಮಾಡಬೇಕು.

ಅಧ್ಯಕ್ಷರು.—ಈ ವಿಷಯ ಇಲ್ಲಿಗೆ ಮುಗಿಯಿತು. ಈಗ ನಿಯಮ ೩೩೪ರ ಪ್ರಕಾರ ಶ್ರೀಮತಿ ಮನೋರಮಾ ಮಧ್ವರಾಜ್‌ರವರ ವಿಷಯವನ್ನು ಪ್ರಸ್ತಾಪಿಸಬೇಕು.

ನಿಯಮ ೩೩೪ರ ಮೇರೆಗೆ

೧) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಐಸ್‌ಪ್ಲಾಂಟ್‌ಗಳಿಂದ ಆಗುವ ವಿದ್ಯುತ್ ಕಳವನ್ನು ತಪ್ಪಿಸಲು ಒತ್ತಾಯ.

† ಶ್ರೀಮತಿ ಮನೋರಮಾ ಮಧ್ವರಾಜ್.—(ಉಡುಪಿ) ಮಾನ್ಯ ಅಧ್ಯಕ್ಷರೆ, ಕರ್ನಾಟಕದ ನಿಗಮ ಮಂಡಳಿಗಳೆಲ್ಲವೂ ಆಭೂತ ಪೂರ್ವ ನಷ್ಟದ ಸಾಧನೆಗೆ ಹೆಸರಾದುದು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ. ಇದಕ್ಕೆ ಕಾರಣ ಹಲವಾರು ಕಳಪೆ ಗುಣಮಟ್ಟದ ಉಪಕರಣಗಳ ಬಳಕೆಯಿಂದ ವಿದ್ಯುತ್ ಸೋರಿಕೆ. ತನ್ನ ಜವಾಬ್ದಾರಿಯನ್ನರಿತು ಕೆಲಸ ಮಾಡಲು ವಿಫಲರಾದ ಅಥವಾ ಎಂಜಲಿನ ದಾಸರಾದ ಅಧಿಕಾರಿಗಳ ಅಸಮರ್ಪಕ ಮೇಲ್ವಿಚಾರಣೆ ನಷ್ಟದ ಮೂಲ ಕಂಡುಹಿಡಿಯಲು ವೈಫಲ್ಯ. ಈ ಕುರಿತು ಕೂಡಾ ಅಧಿಕಾರಿಗಳ ಔದಾಸೀನ್ಯ ಹುಟ್ಟಿಸುವಂತಿದೆ ಪ್ರಾಮಾಣಿಕ ವ್ಯವಹಾರ ಸ್ಥಿತಿಗೆ ಆಡಳಿತೆಯಲ್ಲಿ ನಂಬಿಕೆ ತಪ್ಪುವಂತಾಗಿದೆ. ಆದ್ದರಿಂದ ವಿದ್ಯುತ್ ಪೋಲಾಗುವುದನ್ನು ತಪ್ಪಿಸಲು ಉನ್ನತ ಮಟ್ಟದ ಯಾವುದೇ ರೀತಿಯಲ್ಲಿ ಹಸ್ತಕ್ಷೇಪ ಮಾಡಲು ಆಗದಂಥ Fool Proof...ಮೀಟರುಗಳನ್ನು ಬಳಸಬೇಕು. ಇಲಾಖೆಯವರೇ ಮೀಟರಿನ ಸೀಲು ಒಡೆದು ಅವ್ಯವಹಾರದಲ್ಲಿ ಶಾಮೀಲಾಗುವ ಕುರಿತು ಸೂಕ್ತ ತನಿಖೆ ನಡೆಸಬೇಕು. ಕರ್ನಾಟಕ ಮೀನಂಗಾರಿಕಾ ಅಭಿವೃದ್ಧಿ ನಿಗಮ, ಮಂಗಳೂರು ಮತ್ತು ಮಲ್ಪೆಯ ಸರಕಾರಿ ಮಾಲ್ಜುಗಡ್ಡೆ ಉತ್ಪಾದನಾ ಘಟಕಗಳ ಉತ್ಪಾದನೆ ವಿದ್ಯುತ್ ಬಿಲ್ಲುಗಳನ್ನು ಖಾಸಗೀ ಘಟಕಗಳ ಉತ್ಪಾದನೆ ಬಿಲ್ಲುಗಳೊಂದಿಗೆ ಹೋಲಿಸಿ ನೋಡಿ, ವಂಚಿಸುವ ದುಷ್ಕರ್ಮಿಗಳನ್ನು ಪತ್ತೆ ಹಚ್ಚಿ. ಸೂಕ್ತ ಕ್ರಮ ಕೈಗೊಳ್ಳಬೇಕು. ಬೇಲಿಯೇ ಹೊಲ ಮೇಯುವಂಥ ಕರೆಂಟು ಕಳವಿಗೆ ಶಾಮಿಲಾಗಿರುವ ಲಂಚಕೋರ ಸಿಬ್ಬಂದಿಗಳ ಮೇಲೆ ಉಗ್ರ ಕ್ರಮ ಕೈಗೊಳ್ಳಬೇಕು. ಹಗಲಿನಹೊತ್ತು ಪ್ರವಾಸ ಕಾರ್ಯಕ್ರಮ ರೂಪಿಸಿ, ಮೋಟೀಸ್ ಕೊಟ್ಟು ತನಿಖೆಯೆಂಬ ನಾಟಕವನ್ನು ತನಿಖಾ ದಳದವರು ಮಾಡುವುದು ತಪ್ಪಬೇಕು ಯಾವುದೇ ಮುನ್ಸೂಚನೆಯಿಲ್ಲದೆ ಸಂಚಾರಿ ತನಿಖಾದಳಗಳು ಹಾಗೂ ಇಲಾಖೆಯ ಮೇಲಾಧಿಕಾರಿಗಳು ರಾತ್ರಿ ಸಮಯದಲ್ಲಿ ಹಠಾತ್ತಾಗಿ ಮಂಜುಗಡ್ಡೆ ಘಟಕಗಳನ್ನು ಪರಿಶೀಲಿಸಬೇಕು ಮತ್ತು ತಪ್ಪಿತಸ್ಥರಿಗೆ ಉಗ್ರದಂಡ ವಿಧಿಸಬೇಕು. ಅಧಿಕಾರಿಗಳ ಜೀಪು ಬಂದಾಗ ಘಟಕಗಳನ್ನು ಮುಚ್ಚಿ "ಕೆಲಸ ಮಾಡುತ್ತಿಲ್ಲ" ಎಂದು ಕೇಳುವವರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮಕೈಕೊಳ್ಳಬೇಕು. ಯಾವುದೇ ರೀತಿಯಲ್ಲಿ ಹಸ್ತಕ್ಷೇಪ ಮಾಡಲಾಗದ ಹಿಂದಕ್ಕೆ ತಿರುಗಿಸಲಾಗದ ಮೀಟರುಗಳನ್ನು ದಕ್ಷಿಣ ಕನ್ನಡದಲ್ಲಿ ಮೊದಲು ಐಸ್‌ಪ್ಲಾಂಟ್‌ಗಳಿಗೆ ಒದಗಿಸಬೇಕು. ನಿರ್ದಾಕ್ಷಿಣ್ಯವಾದ ಪ್ರಾಮಾಣಿಕವಾದ ಕ್ರಮದಿಂದ ಅವ್ಯವಹಾರ ತಪ್ಪಿಸಬೇಕು. ಯೋಗ್ಯರಿಗೆ ಆರ್ಥಿಕ ನಷ್ಟವಾಗದಂತೆ ಮೋಸಗಾರರಿಗೆ ಅನುಕೂಲವಾಗದಂತೆ ಧೃಷ್ಟರಿಗೆ ಬೇಟವಿನ ತಾಣವಾಗದಂತೆ ನೋಡಿಕೊಂಡು ಸದ್ವರ್ತನೆಯ ಪ್ರಮಾಣಿಕ ಉದ್ದಿಮೇದಾರರು ಬದುಕುವಂತಾಗಬೇಕು. ತತ್ವರಿಣಾಮವಾಗಿ ಕೆ. ಇ. ಬಿ. ಯ ಸ್ಥಿತಿ ಉತ್ತಮವಾಗಬೇಕು. ಉತ್ತಮವಾಗುವ ಸಲುವಾಗಿ ಸ್ವಲ್ಪ ಚಿಂತನೆಯನ್ನಾದರೂ ಮಾಡಿ ಎಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುಚ್ಛಕ್ತಿ ಮತ್ತು ತೋಟಗಾರಿಕೆ ರಾಜ್ಯ ಸಚಿವರು).—ಮಾನ್ಯ ಸಭಾಧ್ಯಕ್ಷರೇ, ಶ್ರೀಮತಿ ಮನೋರಮಾ ಮಧ್ವರಾಜ್ ಅವರ ಈ ಸಿಳಿತ ಪ್ರಸ್ತಾಪಕ್ಕೆ ಈ ಉತ್ತರ